ಪೊಲೀಸರು ಊರು ಬಿಡುವ ಮೊದಲು ಭರ್ಜರಿಯಾಗಿ ಪಥಸಂಚಲನ ನಡೆಸಿ ಜನರಲ್ಲಿ ಸ್ಥೈರ್ಯ ತುಂಬಿದರು. ಕೊನೆಯಲ್ಲಿ ಎಲ್ಲಾ ವರ್ಗದ ಮುಖಂಡರನ್ನು ಸೇರಿಸಿ ಶಾಂತಿ ಸಭೆ ನಡೆಸಿದರು. ಪೊಲೀಸ್ ಅಧಿಕಾರಿಗಳು ಜನರನ್ನುದ್ದೇಶಿಸಿ ಮಾತಾಡಿದರು.

"ಬಾವುಟವಾಗಲಿ, ಮತ್ತೊಂದನ್ನಾಗಲಿ ಧರ್ಮದ ಕುರುಹು ಅಂತ ಇಟ್ಟುಕೊಳ್ಳೋದು, ಗೌರವಿಸೋದು ತಪ್ಪು ಅಲ್ಲ. ಆದರೆ ಅವುಗಳನ್ನು ಪ್ರದರ್ಶಿಸೋದು, ಆ ಮೂಲಕ ತಮ್ಮ ತಮ್ಮ ಶ್ರೇಷ್ಠತೆಯನ್ನು ಅಭಿವ್ಯಕ್ತಿಸೋದು, ಬೇರೆ ಧರ್ಮಕ್ಕಿಂತ ಮಿಗಿಲೆನ್ನೋ ಒಣ ಡಂಭಾಚಾರದಿಂದ ಮನುಷ್ಯರಲ್ಲಿ ಜೀವಭಯ ಹುಟ್ಟಿಸೋದು ಸರ್ವಥಾ ತಪ್ಪು. ಮನುಷ್ಯನಿಗೆ ಬದುಕು ಮುಖ್ಯ. ಧರ್ಮದ ಒಳಿತು ಜೀವದ್ರವ್ಯವಾಗಬೇಕು. ಕೊಲ್ಲುವುದು ಧರ್ಮವಲ್ಲ, ಬದುಕಿಸೋದು ಧರ್ಮ ಅಂತ ಹೇಳುವುದನ್ನು ನಾವು ಕೇಳಿದ್ದೇವೆ. ಆದರೆ ಧರ್ಮದ ಸೂತ್ರ ಹಿಡಿದುಕೊಂಡು ಅಮಾಯಕ ಜೀವಗಳೊಂದಿಗೆ ಚೆಲ್ಲಾಟವಾಡುವ ಮತಾಂಧರು ನೆಮ್ಮದಿಯಾಗಿರುವ ಊರುಗಳನ್ನು ಸ್ಮಶಾನ, ಕಬರಸ್ತಾನ ಮಾಡಲು ತೆರೆಮರೆಯಲ್ಲಿ ಕಾರಸ್ಥಾನ ಮಾಡುವರು. ಅಂಥವರ ಬಗ್ಗೆ ಜನರು ಮೈತುಂಬಾ ಕಣ್ಣಾಗಿರಬೇಕು. ನಾವೂ ನಿಮ್ಮೊಂದಿಗೆ ಇರುತ್ತೇವೆ. ಜೀವಪುರ ಸಹಬಾಳುವೆಗೆ ಹೆಸರಾಗಿದೆ. ಇದು ಹೀಗೆ ಉಳಿಯಬೇಕು. ಹಾಲಿನಂತ ಹೃದಯಗಳಲ್ಲಿ ಹುಳಿಯ ಒಂದು ಹನಿ ಬೀಳದಂತೆ ಎಚ್ಚರಿಕೆ ವಹಿಸಬೇಕು."

ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಆಡಿದ ಮಾತುಗಳು ಜನರ ಹೃದಯ ತಟ್ಟಿದವು. ಅದರ ಪರಿಣಾಮವೋ ಎನ್ನುವಂತೆ ಊರಿನ ಸಮಾಜವೆನಿಸಿಕೊಂಡ ಹಿರಿಯರು, ಮರುದಿನ ಪ್ರತಿಯೊಂದು ಓಣಿಗೂ, ಕೇರಿಗೂ, ಮೊಹಲ್ಲಾಕ್ಕೂ, ಮತ್ತಲ್ಲಿನ ಪ್ರತಿಯೊಂದು ಮನೆಗಳಿಗೂ ಹೋಗಿ ಜನರ ಮನಸ್ಸಿನಲ್ಲಿದ್ದ ಅನುಮಾನ, ಭಯ ನಿವಾರಿಸುವ ಕೆಲಸ ಮಾಡಿದರು. "ನಮಗ ಬೇಕಾಗಿದ್ದು ಕೇಸರಿ, ಹಸಿರು, ಬಿಳಿ, ನೀಲಿ ಬಾವುಟಗಳಲ್ಲ. ರಾಷ್ಟ್ರಧ್ವಜ. ಅದನ್ನು ನಾವು ಅಭಿಮಾನದಿಂದ ಗೌರವಿಸೋಣ, ಮುಗಿಲೆತ್ತರಕ್ಕೂ ಹಾರಿಸೋಣ" ಎಂದು ತಿಳಿಹೇಳಿದರು.

ಮಾರನೆ ದಿನ ಜೀವಪುರದಲ್ಲಿ ಯಾವ ಬಾವುಟವೂ ಕಾಣಿಸಲಿಲ್ಲ. ಜನರು ನಿರಾತಂಕವಾಗಿ ತಮ್ಮ ತಮ್ಮ ಕೆಲಸದಲ್ಲಿ ತೊಡಗಿಕೊಂಡು, ಎಂದಿನಂತೆ ಸಹಜವಾಗಿ ವ್ಯವಹರಿಸತೊಡಗಿದರು. ಸೂರ್ಯನ ಬೆಳಕು ಚೈತನ್ಯದಾಯವಾಗಿತ್ತು. ಆಕಾಶದಲ್ಲಿ ಗರಿಬಿಚ್ಚಿಕೊಂಡ ಹಕ್ಕಿಗಳ ನೋಟ ಅಪ್ಯಾಯಮಾನವೆನಿಸಿತ್ತು.


**ಅಬ್ಬಾಸ್ ಮೇಲಿನಮನಿ**

ಬಾಗಲಕೋಟೆಯವರಾದ ಅಬ್ಬಾಸ್ ನಿವೃತ್ತ ಕನ್ನಡ ಉಪನ್ಯಾಸಕರು. 'ಕಥೆಯಾದಳು ಹುಡುಗಿ', 'ಭಾವೈಕ್ಯಬಂಧ', 'ಪ್ರೀತಿ ಬದುಕಿನ ಹಾಡು' ಕವನ ಸಂಗ್ರಹಗಳನ್ನು, 'ಪ್ರೀತಿಸಿದವರು 'ಕಣ್ಣಮುಂದಿನ ಕಥೆ', 'ಅರ್ಧಸತ್ಯಗಳು', 'ಮತ್ತೊಂದು ಕರ್ಬಲಾ', 'ಹುಡುಕಾಟ', 'ಅರ್ಥ', 'ಬದುಕು ಎಂದರೆ ಇಷ್ಟ', 'ಕನ್ನಡಿ ಒಳಗಣ ಬಿಂಬ', 'ಬನದ ಹುಣ್ಣಿಮೆ' ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. 'ಜನ್ನತ್ ಮೊಹಲ್ಲಾ' ಎಂಬ ಕಾದಂಬರಿಯನ್ನೂ ಅವರು ಬರೆದಿದ್ದಾರೆ.